# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ –೧೫೬<br>Volume - 156 | ಬೆಂಗಳೂರು, ಶುಕ್ರವಾರ, ೧೩, ಆಗಸ್ಟ್, ೨೦೨೧ (ಶ್ರಾವಣ, ೨೨, ಶಕವರ್ಷ, ೧೯೪೩)<br>BENGALURU, FRIDAY, 13, AUGUST, 2021 (SHRAVANA , 22, SHAKAVARSHA, 1943) | ಸಂಚಿಕೆ ೧೨೪<br>Issue 124 |
|---|---|---|

## ಭಾಗ ೪ಎ

**ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು**

No. KPRC-ADM20RBL/13/2020/DD2

Karnataka Government Secreteriat,
Gate 3, 3rd Floor, M.S.Building,
Bangalore, Dated- 6.7.2021

**NOTIFICATION**

Sub : Declaring February 9th of every year as Bonded Labour System Abolition day in the State of Karnataka,- Regarding

***

The Right against exploitation is enshrined in Article 23-24 of the Indian constitution. Forced labour, human trafficking and child labour are punishable offences in accordance with law. Article 23(2) also makes Bonded Labour unconstitutional. The Parliament of India has enacted the Bonded Labour System (Abolition) Act, 1976, which clearly states that Bonded Labour System is inhuman and a criminal offence. The Act came into effect from 9.2.1976 with the assent of the President of India. Since then, the Act is being implemented by the respective Deputy Commissioners and other authorised officers in all the states of the country. The Central Government from time to time have sent guidelines and Standard Operation Procedure to all State Governments for identifying, releasing and rehabilitating the people working under this system.

Though the state of Karnataka has identified and released a large number of bonded labourers . There is a need to create awareness among the public, companies and the official authorities regarding this system. It is for this reason that the Department of Rural Development and Panchayat Raj, implementing the Bonded Labour Rehabilitation program, is declaring February 9th of every

year as theBonded Labour System Abolition day through which it intends to generate wide spread awareness by carrying out following appropriate activities in relevant Government offices, public places and at the Zilla Panchayat, Taluka Panchayat and Grama Panchayat level.

1. Conducting Pledge programme in all government offices at all levels **Pledge: "I solemnly pledge to endeavour with dedication to make the State of Karnataka Bonded Labour Free and provide justice to people of vulnerable section of the community. I further affirm that, I shall put sincere efforts to establish equality":**

2. Organizing activities like - rallies, Street Plays, formation of human chains, distribution of pamphlets, sharing of experience by released bonded labours in co-ordination and co-operation with Asha Workers, Anganawadi workers and NGOs.
3. Organizing Lecture sessions for officers and officials of relevant departments about Bonded Labour System (Abolition) Act 1976, violation of Human Rights by legal experts and Judges.
4. Creating awareness through wall writing depicting Bonded Labour System and declaration of villages as Bonded Labour free through hoardings/wall writings at public places by the Grama Panchayaths.
5. Organization of District level camps for accomplishing comprehensive rehabilitation of Bonded Labours and providing the children of Bonded Labourers with educational facilities, Scholarships etc.,

In view of above, through this notification February 9th of every year is declared as **Bonded Labour Abolition day** in the State of Karnataka and is to be celebrated in a meaningful way to eradicate the practice of Bonded labour system in every form.

**(Uma Mahadevan)**
Principal Secretary to Government(Panchayat Raj),
Department of Rural Development and Panchayat Raj

**PR-229**

ಕರ್ನಾಟಕ ಸರ್ಕಾರ

ಸಂಖ್ಯೆ-KPRC-ADM20RBL/13/2020/DD2

ಕರ್ನಾಟಕ ಸರ್ಕಾರದ ಸಚಿವಾಲಯ,
3ನೇ ಹಂತ, 3ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ-6.3.2021

ಅಧಿಸೂಚನೆ

ವಿಷಯ : ಕರ್ನಾಟಕ ರಾಜ್ಯದಲ್ಲಿ ಪ್ರತೀ ವರ್ಷ ಫೆಬ್ರುವರಿ 9ನೇ ತಾರೀಖನ್ನು ಜೀತ ಪದ್ಧತಿ ರದ್ಧತಿ ದಿನಾಚರಣೆ ಎಂದು ಘೋಷಿಸಿರುವ ಬಗ್ಗೆ.

ಭಾರತೀಯ ಸಂವಿದಾನದಲ್ಲಿ ಶೋಷಣೆ ವಿರುದ್ಧ ಹಕ್ಕನ್ನು ಅನುಚ್ಛೇದ 23 ಮತ್ತು 24 ರಲ್ಲಿ ವಿವರಿಸಲಾಗಿದೆ. ಈ ಪ್ರಕಾರವಾಗಿ ಒತ್ತಾಯ ಪೂರ್ವಕ ಜೀತ ಹಾಗೂ ಮಾನವ ಕಳ್ಳ ಸಾಗಾಣಿಕೆ, ಮಕ್ಕಳನ್ನು ದುಡಿಸುವುದು , ಶೋಷಿಸುವುದು ಕಾನೂನಿನ್ವಯ ಶಿಕ್ಷಾರ್ಹ ಅಪರಾಧವಾಗಿದೆ. ಇದೇ

ಬುನಾದಿಯ ಮೇಲೆ ಭಾರತದ ಸಂಸತ್ತು ಜೀತ ಪದ್ಧತಿ(ರದ್ಧತಿ) ಕಾಯ್ದೆಯನ್ನು 1976ರಲ್ಲಿ ದೇಶದಾದ್ಯಂತ ಜಾರಿ ಮಾಡಿ ಜೀತಕ್ಕಾಗಿ ವ್ಯಕ್ತಿಯನ್ನು ದುಡಿಸಿಕೊಳ್ಳುವುದು ಅಮಾನವೀಯ ಹಾಗೂ ಕ್ರಿಮಿನಲ್ ಅಪರಾಧವೆಂದು ಕಾಯ್ದೆಯಲ್ಲಿ ಉಲ್ಲೇಖಿಸಿದೆ. ದಿನಾಂಕ 9.2.1976ರಲ್ಲಿ ಜೀತ ಪದ್ಧತಿ ಕಾಯ್ದೆಗೆ ಘನವೆತ್ತ ಭಾರತದ ರಾಷ್ಟ್ರಪತಿಗಳು ಅಂಕಿತ ಹಾಕಿರುತ್ತಾರೆ. ಅಂದಿನಿಂದ , ಜೀತ ಪದ್ಧತಿ(ರ) ಕಾಯ್ದೆ, 1976ರನ್ನು ದೇಶದ ಎಲ್ಲಾ ರಾಜ್ಯಗಳಲ್ಲು ಆಯಾಯ ಜಿಲ್ಲಾಧಿಕಾರಿಗಳು ಹಾಗೂ ಅವರಿಂದ ಪ್ರಾಧೀಕೃತವಾದ ಅಧಿಕಾರಿಗಳು ಜಾರಿ ಮಾಡುತ್ತಿರುವರು. ಈ ಪದ್ಧತಿಯಡಿ ದುಡಿಯುತ್ತಿರುವವರನ್ನು ಗುರುತಿಸಿ , ಬಿಡುಗಡೆಗೊಳಿಸಿ ಪುನರ್ವಸತಿ ಮಾಡುವ ಕುರಿತು ಕೇಂದ್ರ ಸರ್ಕಾರ ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು, ಮಾದರಿ ಕಾರ್ಯವಿಧಾನಗಳನ್ನು ಎಲ್ಲಾ ರಾಜ್ಯ ಸರ್ಕಾರಗಳಿಗೆ ಕಳುಹಿಸುತ್ತಿದೆ.

ಕರ್ನಾಟಕ ರಾಜ್ಯ ಇಡೀ ದೇಶದಲ್ಲೇ ಅತೀ ಹೆಚ್ಚು ಜೀತದಾಳುಗಳನ್ನು ಗುರುತಿಸಿ ಬಿಡುಗಡೆ ಮಾಡಿದ್ದರೂ ಸಹಾ ಸಾರ್ವಜನಿಕರಲ್ಲಿ, ಕಂಪನಿಗಳಲ್ಲಿ , ಅಧಿಕಾರಿ ಸಮುದಾಯದಲ್ಲಿ ಈ ಪದ್ಧತಿಯ ಕುರಿತು ಹೆಚ್ಚು ಅರಿವು ಇನ್ನು ಬರಬೇಕಿದೆ. ಈ ಕಾರಣಕ್ಕಾಗಿಯೇ , ಜೀತದಾಳುಗಳ ಪುನರ್ವಸತಿ ಯೋಜನೆಯನ್ನು ಅನುಷ್ಠಾನ ಮಾಡುತ್ತಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರತೀ ವರ್ಷ ಫೆಬ್ರುವರಿ 9ನೇ ತಾರೀಖನ್ನು **ಜೀತ ಪದ್ಧತಿ ರದ್ಧತಿ ದಿನಾಚರಣೆ** ಎಂದು ಕರ್ನಾಟಕ ರಾಜ್ಯದಲ್ಲಿ ಘೋಷಿಸಿ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ, ಸಾರ್ವಜನಿಕ ಸ್ಥಳದಲ್ಲಿ ಕೆಲವು ಅರ್ಥಪೂರ್ಣ ಚಟುವಟಿಕೆಗಳನ್ನು ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಯೋಜಿಸುವುದು ಸೂಕ್ತವೆಂದು ಭಾವಿಸಿದೆ:

1. ಎಲ್ಲಾ ಹಂತದ ಸರ್ಕಾರಿ ಕಛೇರಿಗಳಲ್ಲಿ ಜೀತ ಪದ್ಧತಿ ರದ್ಧತಿಗೊಳಿಸಲು ಪ್ರತಿಜ್ಞಾ ಕಾರ್ಯಕ್ರಮ ನಡೆಸುವುದು.

   **ಪ್ರತಿಜ್ಞೆ: "ಕರ್ನಾಟಕವನ್ನು ಜೀತ ವಿಮುಕ್ತಗೊಳಿಸಲು, ಸಂಕಷ್ಟದಲ್ಲಿರುವ ಸಮುದಾಯಗಳ ಜನರಿಗೆ ನ್ಯಾಯವನ್ನು ಒದಗಿಸಲು ನನ್ನ ಸೇವೆಯನ್ನು ಮುಡುಪಾಗಿಡುತ್ತೇನೆ , ಈ ಮೂಲಕ ಸಮಾನತೆಯನ್ನು ಸಾಧಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎಂದು ಈ ಮೂಲಕ ಪ್ರತಿಜ್ಞೆ ಮಾಡುತ್ತೇನೆ"**

2. ಜೀತಮುಕ್ತರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಸರ್ಕಾರೇತರ ಸಂಸ್ಥೆಗಳೊಂದಿಗೆ ಸೇರಿ ಸಾರ್ವಜನಿಕ ಸ್ಥಳಗಳಲ್ಲಿ ಜಾತಾ ಹಾಗೂ ಮಾನವ ಸರಪಳಿ ನಿರ್ಮಿಸುವುದು, ಬಿತ್ತಿ ಪತ್ರ ಹಂಚಿಕೆ, ಬೀದಿ ನಾಟಕ , ಜೀತವಿಮುಕ್ತರ ಅನುಭಗಳನ್ನು ಹಂಚಿಕೊಳ್ಳುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು.

3. ಅಧಿಕಾರಿಗಳಿಗೆ ಜೀತ ಕಾಯ್ದೆ, ಮಾನವ ಹಕ್ಕುಗಳ ಉಲ್ಲಂಘನೆ ವಿಷಯಗಳ ಕುರಿತು ಕಾನೂನು ತಜ್ಞರಿಂದ, ನ್ಯಾಯಾಧೀಶರುಗಳಿಂದ ಅಧಿವೇಶನಗಳನ್ನು ಆಯೋಜಿಸುವುದು.

4. ಗ್ರಾಮ ಪಂಚಾಯಿತಿಗಳ ಸಾರ್ವಜನಿಕ ಸ್ಥಳದಲ್ಲಿ ಜೀತ ಪದ್ಧತಿ ಕುರಿತಂತೆ ಚಿತ್ರಗಳಿಂದ ಕೂಡಿದ ಗೋಡೆ ಬರಹ ಬರೆಸುವುದು, ಜೀತಮುಕ್ತ ಗ್ರಾಮಗಳನ್ನು ಫಲಕ/ ಗೋಡೆ ಬರಹದ ಮೂಲಕ ಘೋಷಿಸುವುದನ್ನು ಮಾಡಬೇಕು.

5. ಜೀತದಾಳುಗಳ ಪುನರ್ವಸತಿಯನ್ನು ಸಮಗ್ರವಾಗಿ ನೆರವೇರಿಸಲು ಜಿಲ್ಲಾ ಮಟ್ಟದಲ್ಲಿ ಶಿಭಿರಗಳನ್ನು ಆಯೋಜಿಸುವುದು, ಜೀತವಿಮುಕ್ತರ ಮಕ್ಕಳಿಗೆ ಶಿಕ್ಷಣ ಸೌಲಭ್ಯ , ವಿದ್ಯಾರ್ಥಿ ವೇತನಗಳನ್ನು ನೀಡುವುದನ್ನು ಮಾಡಬೇಕು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



6. ಜೀತ ನಿರ್ಮೂಲನೆಗಾಗಿ ದುಡಿದ ಸಂಸ್ಥೆ, ಅಧಿಕಾರಿಗಳನ್ನು, ಗುರುತಿಸಿ ಅವರಿಗೆ ಸನ್ಮಾನ ಸಮಾರಂಭ ಏಪರ್ಡಿಸುವುದನ್ನು ಜಿಲ್ಲಾ ಹಾಗೂ ತಾಲ್ಲೂಕು ಹಂತದಲ್ಲಿ ಮಾಡಬೇಕು.

ಈ ಎಲ್ಲಾ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಕರ್ನಾಟಕ ರಾಜ್ಯದಲ್ಲಿ ಪ್ರತೀ ವರ್ಷ ಫೆಬ್ರುವರಿ 9ನೇ ತಾರೀಖನ್ನು **ಜೀತ ಪದ್ಧತಿ ರದ್ಧತಿ ದಿನಾಚರಣೆ** ಎಂದು ಘೋಷಿಸಿ ಅದನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂದು ಈ ಅಧಿಸೂಚನೆ ಮೂಲಕ ಆದೇಶ ಹೊರಡಿಸಿದೆ.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

**PR-230**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

SUNIL GARDE